# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ

# ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು

## ದಿನಾಂಕಃ 4 ನೇ ಏಪ್ರಿಲ್ ಮಾಹೆ 2025

ಉಪಸ್ಥಿತರು : ಶ್ರೀಮತಿ ಮೇಘಶ್ರೀ, ಬಿ.ಕಾಂ. ಎಲ್. ಎಲ್. ಬಿ,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು 2 ನೇ ಹೆಚ್ಚುವರಿ
ಜೆ.ಎಂ.ಎಫ್.ಸಿ ರಾಣೇಬೆನ್ನೂರು

## ಓ.ಎಸ್.ನಂ.30/2024

ವಾದಿ : ಶ್ರೀಮತಿ ರೇಣುಕವ್ವ ಕೋಂ ಸಣ್ಣಿಂಗಪ್ಪ ಪೂಜಾರ
ಹಾಗೂ ಇತರರರು

(ಅರ್ಜಿದಾರರ ಪರವಾಗಿ ಶ್ರೀ ಎಮ್.ಬಿ.ಜಿ., ವಕೀಲರು)

## ವಿರುದ್ಧ

ಪ್ರತಿವಾದಿ : 1. ಹನುಮಪ್ಪ @ ಹನುಮಂತಪ್ಪ ತಂದೆ
ನಾಗಪ್ಪ ಅಯ್ಯಜ್ಜನವರ
ಹಾಗೂ ಇತರರು.

(1 ರಿಂದ 5 ನೇ ಪ್ರತಿವಾದಿಗಳ ಪರವಾಗಿ
ಶ್ರೀ ಎಮ್.ಎಮ್.ಹೆಚ್, ವಕೀಲರು,
6 ರಿಂದ 13 ನೇ ಪ್ರತಿವಾದಿಗಳು ಏಕಪಕ್ಷೀಯವಾಗಿರುತ್ತಾರೆ )

### ಮಧ್ಯಂತರ ಅರ್ಜಿ ಸಂಖ್ಯೆ: 1

ಅರ್ಜಿದಾರ : ಸಂಜೀವ ತಂದೆ ಧರ್ಮಪ್ಪ ಯಡಚಿ

**ವಿರುದ್ಧ**

ಎದುರುದಾರರು : 1. ಹನುಮಪ್ಪ @ ಹನುಮಂತಪ್ಪ ತಂದೆ ನಾಗಪ್ಪ ಅಯ್ಯಜ್ಜನವರ ಹಾಗೂ ಇತರರು

**ಮಧ್ಯಂತರ ಅರ್ಜಿ ಸಂಖ್ಯೆ- 1 ರ ಮೇಲೆ ಆದೇಶ**

ಈ ದಾವೆಯ ವಾದಿ / ಅರ್ಜಿದಾರರು ದಿವಾಣಿ ಪ್ರಕ್ರಿಯೆ ಸಂಹಿತೆ 1908 ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ-1 ನ್ನು ಸಲ್ಲಿಸಿ ದಾವೆಯು ಇತ್ಯರ್ಥವಾಗುವರೆಗೆ 1 ರಿಂದ 5 ನೇ ಪ್ರತಿವಾದಿಯರಾಗಲಿ ಅಥವ ಅವರ ಪರ ಯಾರೇ ಆಗಲಿ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ದಾವೆಯ ಸಂಕ್ಷಿಪ್ತ ಸಾರಾಂಶ**

2. ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಡಿಕ್ರಿ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಹೂಡಿರುತ್ತಾರೆ. ದಾವಾ ಆಸ್ತಿಯನ್ನು ವಾದಿಯ ಹಿರಿಯರು ಖರೀದಿ ಮಾಡಿರುತ್ತಾರೆ. ದಾವಾಸ್ತಿಯನ್ನು ನಾಗಪ್ಪ ಹನುಮಪ್ಪ ಅಜ್ಜಯ್ಯನವರು 1957 ನೇ ಇಸವಿಯಲ್ಲಿ ವಾದಿಯರ ಹಿರಿಯರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ವಾದಿಯರ ಹಿರಿಯರು ಮರಣ ಹೊಂದಿದ ನಂತರ ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ. ಆದರೆ 1 ನೇ ಪ್ರತಿವಾದಿಯು ವಾದಿಯರ ಹಿರಯರ ಗಮನಕ್ಕೆ ಬರದಂತೆ ದಾವಾ ಆಸ್ತಿಯ ದಾಖಲೆಯಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಂಡಿರುತ್ತಾರೆ. ನಂತರ 1 ನೇ ಪ್ರತಿವಾದಿಯು 2 ರಿಂದ 5 ನೇ ಪ್ರತಿವಾದಿಯರಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಮತ್ತು ದಾವಾ

ಆಸ್ತಿಯ ಸ್ವಾಧೀನಕ್ಕೆ ತೊಂದರೆ ಉಂಟು ಮಾಡುತ್ತಿರುವ ಕಾರಣ ಪ್ರಸ್ತುತ ದಾವೆಯನ್ನು ತಮ್ಮ ಮಾಲೀಕತ್ವದ ಘೋಷಣೆ ಕೋರಿ ಹೂಡಿರುತ್ತಾರೆ.

3. ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ-1 ಕ್ಕೆ ತಕರಾರು ಆಗಿ ಅಳವಡಿಸಿಕೊಂಡಿರುತ್ತಾರೆ.

4. ಅರ್ಜಿ ಮತ್ತು ತಕರಾರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಮತ್ತು ವಾದ ವಿವಾದಗಳನ್ನು ಗಮನಿಸಿದ ನಂತರ ಅರ್ಜಿಯ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

ಅಂಶಗಳು

1.ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ?

2.ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

3.1 ನೇ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಾಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?

4.ಯಾವ ಆದೇಶ?

5. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ |
| ಅಂಶ-2 | : | ನಕಾರಾತ್ಮಕವಾಗಿ |

| | | |
|---|---|---|
| ಅಂಶ-3 | : | ನಕಾರಾತ್ಮಕವಾಗಿ |
| ಅಂಶ-4 | : | ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

## ಕಾರಣಗಳು

6. ಅಂಶ-**1** ರಿಂದ **3**- ಈ ಮೂರು ಅಂಶಗಳು ಒಂದಕ್ಕೊಂದು ಸಂಬಂಧಿಸಿದ್ದು, ಚರ್ಚೆಯ ಪುನರಾವರ್ತಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಯಿತು.

7. ಪ್ರಸ್ತುತ ಮಧ್ಯಂತರ ಅರ್ಜಿಯನ್ನು 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ತಾತ್ಕಲಿಕ ನಿರ್ಬಂಧ ಕಾಜ್ಞೆ ಕೋರಿ ವಾದಿಯರು ಹೂಡಿರುತ್ತಾರೆ. 1 ರಿಂದ 5 ನೇ ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದ ಪತ್ರದ ಎಲ್ಲಾ ಅಂಶಗಳನ್ನು ಅಲ್ಲಗಳೆದಿದ್ದು, ದಾವಾ ಆಸ್ತಿಯು 1 ನೇ ಪ್ರತಿವಾದಿಯರ ತಂದೆ ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರಸ್ತುತವಾಗಿಯು ಪ್ರತಿವಾದಿಯರ ಸ್ವಾಧೀನದಲ್ಲಿರುತ್ತದೆಂದು ಹೇಳಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಮರಣ ಹೊಂದಿದ ಮೇಲೆ 1 ನೇ ಪ್ರತಿವಾದಿಯ ಹೆಸರು ವಾರಸ ಪ್ರಕಾರ ದಾಖಲೆಗಳಲ್ಲಿ ನಮೂದಾಗಿರುತ್ತದೆ. ಸದರಿ ಕಾರಣಗಳಿಂದ ಪ್ರಸ್ತುತ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

8. ವಾದಿಯು ನ್ಯಾಯಾಲಯದ ಮುಂದೆ ಖರೀದಿಪತ್ರ, ಮ್ಯೂಟೇಶನ್, ವಿದ್ಯುತ್ ಬಿಲ್ ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರತಿವಾದಿಯರು ದಾವಾ ಸ್ವತ್ತಿನ ದಾಖಲೆ, ಮ್ಯೂಟೇಶನ್ ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ವಾದ ಪತ್ರದಲ್ಲಿ ನಮೂದಿಸಿರುವ ಹಿರಿಯರು ದಾವಾ ಆಸ್ತಿಯನ್ನು ಖರೀದಿ ಪತ್ರದಂತೆ ಖರೀದಿ ಮಾಡಿರುವುದು ಕಂಡು ಬರುತ್ತದೆ ಮತ್ತು ಸಿ ಟಿ ಎಸ್ ನಂ.1725 ರ ದಾಖಲೆಯಲ್ಲಿ 1

ರಿಂದ 5 ನೇ ಪ್ರತಿವಾದಿಯರ ಹೆಸರು ನಮೂದಾಗಿರುವುದು ಸಹ ಕಂಡು ಬರುತ್ತದೆ ಮತ್ತು ಸದರಿ ದಾಖಲೆಯಲ್ಲಿ ವಾದಿಯರು ತಕರಾರನ್ನು ಸಲ್ಲಿಸಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು 1 ನೇ ಪ್ರತಿವಾದಿ ಮಾಡಿಕೊಟ್ಟಂತಹ ಭಕ್ಷೀಸ್ ಪತ್ರದ ಆಧಾರದ ಮೇಲೆ ದಾವಾಸ್ತಿಯಲ್ಲಿ ಪ್ರತಿವಾದಿಯರ ಹೆಸರನ್ನು ನಮೂದಿಸಿರುವುದು ಕಂಡು ಬರುತ್ತದೆ. ವಾದಿಯರು ವಾದ ಪತ್ರದಲ್ಲಿ ವಾದಿಯರು ಹಾಗೂ 6 ರಿಂದ 13 ನೇ ಪ್ರತಿವಾದಿಯರು ಒಂದೇ ಕುಟುಂಬದ ಸದಸ್ಯರು ಎಂದು ಹೇಳಿದ್ದು, ಸದರಿ ವಿಷಯವನ್ನು ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ಖಂಡಿಸಿರುತ್ತಾರೆ. ಸದರಿ ದಾಖಲೆಗಳ ಪರಿಶೀಲಿಸಿದ ಮೇಲೆ ದಾವಾಸ್ತಿಯು ಮೂಲತಃ ಯಾರ ಆಸ್ತಿಯಾಗಿತ್ತು ಮತ್ತು ಕಾನೂನು ಬದ್ಧವಾಗಿ ಹೇಗೆ ವರ್ಗಾವಣೆ ಆಯಿತು ಎಂಬುದನ್ನು ತಿಳಿಯಲು ಸಂಪೂರ್ಣ ವಿಚಾರಣೆ ಅವಶ್ಯಕತೆ ಇರುತ್ತದೆ. ಆದರೆ ವಾದಿಯರು ದಾವಾಸ್ತಿಯ ಸ್ವಾಧೀನದಲ್ಲಿರುವುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ವಿದ್ಯುತ್ ಬಿಲ್ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದರೆ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರು ಕಂಡು ಬಂದಿದ್ದು, ಪ್ರಸ್ತುತವಾಗಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ಅಭಿಪ್ರಾಯಕ್ಕೆ ಬರಲು ಸಂಪೂರ್ಣ ವಿಚಾರಣೆಯ ಅವಶ್ಯಕತೆ ಇರುತ್ತದೆ. ಇಲ್ಲಿ ಮಾಲೀಕತ್ವ ಮತ್ತು ಸ್ವಾಧೀನದ ಕುರಿತು ಗೊಂದಲ ಉಂಟಾಗಿರುವ ಕಾರಣ ಪ್ರಸ್ತುತ ಅರ್ಜಿಯನ್ನು ಊರ್ಜಿತಗೊಳಿಸಿದರೆ ಅಥವಾ ನಿರಾಕರಿಸಿದರೆ ಇಬ್ಬರು ಪಕ್ಷಗಾರರು ನಷ್ಟವನ್ನು ಅನುಭವಿಸಬೇಕಾಗುತ್ತದೆ. ಆದಕಾರಣ ಇಬ್ಬರು ಪಕ್ಷಗಾರರು ದಾವಾಸ್ತಿಯ ಯಥಾಸ್ಥಿತಿಯನ್ನು ಕಾಪಾಡಿಕೊಂಡು ನಷ್ಟವನ್ನು ತಡೆಗಟ್ಟಬಹುದಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಅಂಶ-1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

9. ಅಂಶ-4- ಅಂಶ-1 ರಿಂದ 3 ರಲ್ಲಿ ಚರ್ಚಿಸಲಾದ ಅನುಸಾರ ಈ ಕೆಳಗಿನಂತೆ

## ಆದೇಶ

ದಿವಾಣಿ ಪ್ರಕ್ರಿಯೆ ಸಂಹಿತೆ 1908, ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಮಧ್ಯಂತರ ಅರ್ಜಿ-1 ನ್ನು ತಿರಸ್ಕರಿಸಲಾಗಿದೆ.

ಇಬ್ಬರು ಪಕ್ಷಗಾರರು ದಾವಾ ಆಸ್ತಿಯ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕಾಗಿ ಆದೇಶಿಸಲಾಗಿದೆ.

ಖರ್ಚುಗಳ ಬಗ್ಗೆ ಆದೇಶವಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ ದಿನಾಂಕ 4 ನೇ ಏಪ್ರಿಲ್ 2025 ನೇ ಇಸವಿಯಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

C/c ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
1 ನೇ ಹೆಚ್ಚುವರಿ ಜೆ ಎಮ್ ಎಫ್ ಸಿ,
ರಾಣೇಬೆನ್ನೂರು.